ವಾರದ ಪತ್ರ

## ಹೆಣ್ತನ-ತಾಯ್ತನದ ಅನಾವರಣ

ಝೀ ಕನ್ನಡದ 'ಸೀತಾರಾಮ' ಧಾರಾವಾಹಿಯಲ್ಲಿ ಹೆಣ್ತನ ಹಾಗೂ ತಾಯ್ತನದ ಆಯಾಮಗಳನ್ನು ಸೀತಾ, ಶಾಲಿನಿ, ಸಾಧನಾ ಪಾತ್ರಧಾರಿಗಳ ಮೂಲಕ ಅರ್ಥಪೂರ್ಣವಾಗಿ ತಿಳಿಸಿದ್ದಾರೆ. ಬಾಡಿಗೆ ತಾಯಿಯಾದರೂ ಹೊತ್ತು ಹೆತ್ತ ಸೀತಾಳ ಚಡಪಡಿಕೆ, ಅಂಡಾಣು ನೀಡಿದ ಶಾಲಿನಿಗೆ ಮಗುವಿನ ಮೇಲೆ ಅನಾಸಕ್ತಿ, ತಾಯಾಗದಿರುವ ಸಾಧನಾಳ ನೋವು ಎಲ್ಲವನ್ನು ಪಾತ್ರಧಾರಿಗಳು ಮನಮುಟ್ಟುವಂತೆ ಅಭಿನಯಿಸಿದ್ದಾರೆ.

—ಓಂಕಾರ್ ಗುರುಸಿದ್ದಪ್ಪ ಕೊಟ್ರೆ, ಬೆಂಗಳೂರು

## ಸತ್ಯದ ಕೈಗನ್ನಡಿ

ಪ್ರಾಮಾಣಿಕತೆ ಮತ್ತು ದಕ್ಷತೆಯಿಂದ ಶ್ರಮಪಟ್ಟು ದುಡಿದರೆ ಮನೆಯಲ್ಲಿ ಲಕ್ಷ್ಮಿ ನೆಲೆಸುತ್ತಾಳೆ ಎನ್ನುವ ಸಾರ್ವಕಾಲಿಕ ಸತ್ಯವನ್ನು ಝೀ ಕನ್ನಡ ವಾಹಿನಿಯ 'ಲಕ್ಷ್ಮೀ ನಿವಾಸ' ಧಾರಾವಾಹಿ ಪ್ರತಿಪಾದಿಸಿದಂತಿದೆ. ಕುಟುಂಬದ ಮುಖ್ಯಸ್ಥರು, ಪೋಷಕರು ತಮ್ಮ ಜವಾಬ್ದಾರಿಯನ್ನು ಹೇಗೆ ನಿಭಾಯಿಸಬೇಕು, ಮಕ್ಕಳ ಜೊತೆ ಹೇಗೆ ಹೊಂದಾಣಿಕೆ ಮಾಡಿಕೊಳ್ಳಬೇಕು ಎನ್ನುವ ತಿಳಿವಳಿಕೆಯನ್ನು ಇದು ಮೂಡಿಸುತ್ತಿದೆ. ಪಾತ್ರಧಾರಿಗಳ ಅಭಿನಯ, ಕಥೆಗೆ ನ್ಯಾಯ ಒದಗಿಸುತ್ತಿರುವ ಬಗೆ ನಮ್ಮ ನಡುವಿನ ನೈಜಕಥೆಯಂತೆ ಭಾಸವಾಗುತ್ತದೆ.

—ಕುಬೇರಪ್ಪ ಎಂ. ವಿಭೂತಿ, ಹರಿಹರ

## ಯೋಚನೆಗೆ ಹಚ್ಚುವ ಹರಟೆ

ಚಂದನದ 'ಚಂದದ ಹರಟೆ' ಕಾರ್ಯಕ್ರಮ ವಿಶಿಷ್ಟವಾದುದು. ಇತ್ತೀಚಿನ ಸಂಚಿಕೆಯೊಂದರಲ್ಲಿ 'ಮದುವೆ ಮುನ್ನ ಪ್ರೀತಿ, ಮದುವೆ ನಂತರದ ಪ್ರೀತಿ' ಎಂಬ ವಿಚಾರದ ಹರಟೆಯಲ್ಲಿ ಎಂ.ಎಸ್. ನರಸಿಂಹಮೂರ್ತಿ ಅವರು, 'ಗಿಳಿಗಳ ಆಯಸ್ಸು ಎಂಬತ್ತು ವರ್ಷ, ಒಂದು ಗಂಡು ಮತ್ತೊಂದು ಹೆಣ್ಣಿನ ಜೊತೆ ಸಾಂಗತ್ಯ ಬೆಳೆಸಿದರೆ, ಇವು ಎಂದೂ ಮತ್ತೊಂದರ ಸಾಂಗತ್ಯ ಬೆಳೆಸುವುದಿಲ್ಲ. ಆಕಸ್ಮಿಕವಾಗಿ ಒಂದು ಗಿಳಿ ಸತ್ತರೆ ಬದುಕಿದ ವಿಧುರ ಗಿಳಿ ತನ್ನ ಸಂಗಾತಿ ನೆನಪಿನಲ್ಲೇ ಒಂದೆರಡು ತಿಂಗಳುಗಳಲ್ಲಿ ಸತ್ತು ಹೋಗುತ್ತದೆ. ಈ ನಿಷ್ಠೆ ಮಾನವರಾದ ನಮ್ಮಲ್ಲಿ ಯಾಕೆ ಇಲ್ಲ?' ಎಂದು ಪ್ರಶ್ನಿಸಿದರು. ಮುಂದುವರೆದು 'ಗೂಬೆಗಳ ಆಯಸ್ಸು ಇಪ್ಪತ್ತು ವರ್ಷ. ಅವು ಏಕಸಂಗಾತಿಯೊಂದಿಗೆ ಜೀವನ ನಿರ್ವಹಿಸುತ್ತವೆ. ಸಂಗಾತಿ ಆಕಸ್ಮಿಕವಾಗಿ ಸತ್ತು ಹೋದರೆ ಬದುಕಿದ ಗೂಬೆ ಜೀವನ ಪರ್ಯಂತ ಏಕಾಂಗಿಯಾಗಿ ಬದುಕುತ್ತದೆ. ಇಂತಹ ನಿಷ್ಠೆ ಮಾನವರೂ ಅಳವಡಿಸಿಕೊಂಡರೆ ಎಷ್ಟು ಚಂದ' ಎಂದರು. ಯೋಚಿಸಬೇಕಾದ ಸಂಗತಿಗಳಲ್ಲವೆ?

—ಮಲ್ಲಿಕಾರ್ಜುನ ಸುರಧೇನುಪುರ

## ಕನ್ನಡ ಕಟ್ಟುವ ಬಗೆ

ಚಂದನ ವಾಹಿನಿಯ 'ಥಟ್ ಅಂತ ಹೇಳಿ' ಕಾರ್ಯಕ್ರಮದ ಇತ್ತೀಚಿನ ಸಂಚಿಕೆಯಲ್ಲಿ ನಿರೂಪಕ ಕೆ. ಸೋಮೇಶ್ವರ 'ಕನ್ನಡ ಪುಸ್ತಕ ಓದಿ, ಕನ್ನಡ ಬೆಳೆಸಿ' ಎಂದರು. ಆಗ ಆತಂಕದ ಸಂಗತಿಯೊಂದನ್ನು ಅವರು ಪ್ರಸ್ತಾಪಿಸಿದರು. ಕೇವಲ ಶೇ. 30ರಷ್ಟು ಮಂದಿ ಕನ್ನಡ ಮಾತನಾಡುತ್ತಾರೆ. ಮನೆಯಲ್ಲಿ ಮಕ್ಕಳು ಮೊಮ್ಮಕ್ಕಳೂ ಇಂಗ್ಲಿಷ್‌ನಲ್ಲೇ ವ್ಯವಹರಿಸುತ್ತಿದ್ದಾರೆ. ಸಾರ್ವಜನಿಕ ಸ್ಥಳಗಳಲ್ಲಿ ಕನ್ನಡ ಮಾತನ್ನು ಕೇಳುವುದೇ ಅಪರೂಪ. ಹಿರಿಯರು ಇದರ ಬಗ್ಗೆ ಗಂಭೀರವಾಗಿ ಯೋಚಿಸಬೇಕು. ನುಡಿಗನ್ನಡ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು ಎಂಬ ಸಂದೇಶ ನೀಡಿದರು. ಅದು ನಾವೆಲ್ಲ ಚಿಂತಿಸಬೇಕಾದ ಗಂಭೀರ ವಿಷಯ.

—ಭಾರತೀ ಗಂಗಾಧರ್, ಬೆಂಗಳೂರು

## ಅನುಬಂಧಕ್ಕೆ 'ದೃಷ್ಟಿಬೊಟ್ಟು' ಬೇಕೆ?




ನಮ್ಮಲ್ಲಿ ಚೆಂದದ ಮಕ್ಕಳಿಗೆ ದೃಷ್ಟಿ ತಾಗದಿರಲಿ ಎಂದು 'ದೃಷ್ಟಿಬೊಟ್ಟು' ಇಡುವುದು ಸಂಪ್ರದಾಯ. ಇತ್ತೀಚೆಗೆ ಕಲರ್ಸ್ ಕನ್ನಡದಲ್ಲಿ ಆರಂಭವಾಗಿರುವ ಧಾರಾವಾಹಿಯ ಹೆಸರೂ 'ದೃಷ್ಟಿಬೊಟ್ಟು'. ಇದರಲ್ಲಿ ನಾಯಕಿಯ ತಾಯಿ ಮಗಳ ಮೇಲೆ ಯಾರ ಕಣ್ಣು ಬೀಳದಿರಲೆಂದು ಅವಳ ಮೈ ಪೂರ್ಣ ಕಪ್ಪಾಗಿರುವಂತೆ ಮಾಡಿದ್ದಾಳೆ.

2024ರ ಅನುಬಂಧ ಅವಾರ್ಡ್ಸ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ನಟ, ನಟಿಯರು ಮತ್ತು ತಾಂತ್ರಿಕ ಸಿಬ್ಬಂದಿ ಚೆಂದದ ಮೇಕಪ್‌ನಲ್ಲಿ ಬಂದಿದ್ದರು. ಆದರೆ, 'ದೃಷ್ಟಿಬೊಟ್ಟು' ನಾಯಕಿ ಮಾತ್ರ ಧಾರಾವಾಹಿಯ ಮೇಕಪ್‌ನಲ್ಲೇ ಬಂದಿದ್ದರು. ವರ್ಣಮಯ 'ಅನುಬಂಧ ಅವಾರ್ಡ್ಸ್ 2024'ಗೆ ದೃಷ್ಟಿ ಬೀಳಬಾರದು ಎಂದು ಹೀಗೆ ಮಾಡಿದ್ರಾ ಎಂದು ಒಂದು ಕ್ಷಣ ಚಕಿತಳಾದೆ.

—ಪ್ರಿಯಾಂಕಾ, ಬೆಂಗಳೂರು

## ಗುರು ಶಿಷ್ಯರ ಅಪೂರ್ವ ಅನುಬಂಧ

'ಅನುಬಂಧ' ಕಾರ್ಯಕ್ರಮ ಒಬ್ಬ ಅದ್ಭುತ 'ಬೋಧಕ ಭಗವಂತ'ನ ಪರಿಚಯ ಮಾಡಿಸಿತು. ಮೂಲತಃ ಮೈಸೂರಿನವರಾದ ಅವರು ಹುಬ್ಬಳ್ಳಿಯಲ್ಲಿ ಗಣಿತ ಬೋಧಕರಾಗಿದ್ದಾರೆ. 500ಕ್ಕೂ ಹೆಚ್ಚು ಬಡ ವಿದ್ಯಾರ್ಥಿಗಳಿಗೆ ತಮ್ಮ ಖರ್ಚಿನಲ್ಲಿ ವ್ಯಾಸಂಗ ಮಾಡಿಸಿದ್ದಾರೆ. ಅಂತಹ ಆದರ್ಶ ಅಧ್ಯಾಪಕ ಶ್ರೀಧರ ಚಕ್ರವರ್ತಿ. ಅವರಿಂದ ಪಾಠ ಕಲಿತ ಸಾವಿರಾರು ವಿದ್ಯಾರ್ಥಿಗಳು ದೇಶ ವಿದೇಶಗಳಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದ್ದಾರೆ. 35 ವರ್ಷಗಳ ಹಿಂದಿನ ವಿದ್ಯಾರ್ಥಿಗಳ ಹೆಸರನ್ನು ಹೇಳಿದ್ದು ಅಚ್ಚರಿ ಮಾತ್ರವಲ್ಲದೆ ವೀಕ್ಷಕರ ಕಣ್ಣನ್ನು ಮಂಜಾಗಿಸಿತು. ನಮ್ಮ ವಾರಾಂತ್ಯದ ಸಂಜೆಯನ್ನು ಸಾರ್ಥಕವಾಗಿಸಿದ ವಾಹಿನಿಗೆ ಧನ್ಯವಾದಗಳು.

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ

'ಅನುಬಂಧ ಅವಾರ್ಡ್ಸ್' ಮನರಂಜನೆಯ ಜೊತೆಗೆ ಸಾಮಾಜಿಕ ಜವಾಬ್ದಾರಿಯನ್ನೂ ಮೆರೆದಿದೆ. ಅಧ್ಯಾಪಕ ಶ್ರೀಧರ ಎಸ್. ಚಕ್ರವರ್ತಿ ಅವರು ತಮ್ಮ ಸಂಪತ್ತನ್ನು ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಧಾರೆಯೆರೆದಿದ್ದಾರೆ. ಅವರನ್ನು ಗೌರವಿಸಿದ್ದು ವೇದಿಕೆಗೆ ಮೆರುಗು ತುಂಬಿತು. ಶ್ರೀಧರ್ ಚಕ್ರವರ್ತಿ ಅವರಂತಹ ಶಿಕ್ಷಕರು ಅಪರೂಪ ಎಂದೇ ಹೇಳಬಹುದು. ತಮಗೆ ಗೌರವದ ಜೊತೆ ಸಿಕ್ಕ ಹಣವನ್ನೂ ವೇದಿಕೆಯಲ್ಲೇ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ದಾನ ಮಾಡಿದರು.

—ಬೀ. ನಾಗರಾಜು, ಬೆಂಗಳೂರು

ಮೂರು ದಿನ ಪ್ರಸಾರವಾದ 'ಅನುಬಂಧ' ಕಾರ್ಯಕ್ರಮ ದೀಪಾವಳಿ ಸಂಭ್ರಮವನ್ನು ಮೀರಿಸುವಂತೆ ಇತ್ತು. ಆದರೆ, ಕಲಾವಿದರ ಮಾತುಕತೆಯಲ್ಲಿನ ಡಬಲ್ ಮೀನಿಂಗ್ ಡೈಲಾಗ್ ಬೇಸರ ತರಿಸಿತು.

—ವಿನಯ್ ಎಂ.ಎಸ್., ಬೆಂಗಳೂರು

'ಅನುಬಂಧ ಅವಾರ್ಡ್ಸ್' ಕಾರ್ಯಕ್ರಮ ವೈಭವದಿಂದ ಕೂಡಿತ್ತು. ಕಲಾವಿದರ ಅಭಿನಯಕ್ಕೆ ಸಂದ ಪುರಸ್ಕಾರ ಅರ್ಥಪೂರ್ಣ. ಅತಿಥಿಗಳ ಆಯ್ಕೆ ವಿಶೇಷವಾಗಿತ್ತು. ಕುಟುಂಬಸ್ಥರ ಪರಿಚಯದ ಜೊತೆಗೆ ಮನರಂಜನೆಗೆ ಆಯೋಜಿಸಿದ್ದ ಕಲಾವಿದರ ನೃತ್ಯ, ಹಾಡು, ಮನಸೂರೆಗೊಂಡಿತು.

—ಬಿ. ಗಂಗಾಧರ್, ಬೆಂಗಳೂರು